# ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಾರ್ಯಾಲಯ,
# ಪ್ರಾದೇಶಿಕ ಅರಣ್ಯ ವಿಭಾಗ, ಬೀದರ.

ಸಂ:ಎ1:ಬಿಜಿಟಿ:ಅಕಾ:ಟೆಂಡರ್:ಸಿಆರ್–46/2019–20 ದಿನಾಂಕ: 06–08–2019.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಷಯ: 2019–20ನೇ ಸಾಲಿನಲ್ಲಿ ಅರಣೀಕರಣ ಕಾಮಗಾರಿ ನಿರ್ವಹಿಸಲು ಟೆಂಡರ್ ಪ್ರಕಟಣೆ ಕುರಿತು.

0=0=0

ಈ ಮೂಲಕ ಬೀದರ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೊಂದಾಯಿಸಲ್ಪಟ್ಟಿರುವ ಅರಣ್ಯ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2019–20ನೇ ಸಾಲಿನಲ್ಲಿ ಅರಣೀಕರಣ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿರುತ್ತದೆ. ಈ ಕಾಮಗಾರಿಗಳನ್ನು ನಿರ್ವಹಿಸಲು ಇಚ್ಛೆಯುಳ್ಳ ಈ ವಿಭಾಗದಲ್ಲಿ 2019–20ನೇ ಸಾಲಿಗೆ ನೋಂದಣಿ ಮಾಡಿಸಿರುವ ಅರ್ಹ ಅರಣ್ಯ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಷರತ್ತಿಗೊಳ್ಳಪಟ್ಟು ಕರೆಯಲಾಗಿದೆ. ಟೆಂಡರ್ ದಿನಾಂಕದ ವಿವರಗಳು ಈ ಕೆಳಗಿನಂತೆ ಇರುತ್ತವೆ.

| | | |
|---|---|---|
| 1. | ಟೆಂಡರ್ ಫಾರಂಗಳನ್ನು ವಿತರಿಸುವ ದಿನಾಂಕ | ಈ ಕಛೇರಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆಯ ದಿನಾಂಕ ದಿಂದ ದಿ: 21–08–2019ರ ಅಪರಾಹ್ನ 1.30 ಗಂಟೆ ಒಳಗಾಗಿ ನೀಡಲಾಗುವುದು. |
| 2. | ಟೆಂಡರ ಫಾರಂಗಳನ್ನು ಸ್ವೀಕರಿಸುವ ದಿನಾಂಕ ಹಾಗೂ ಸಮಯ | ದಿ: 22–08–2019 ರಂದು 1.30 ಗಂಟೆ ಒಳಗಾಗಿ |
| 3. | ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ | ದಿನಾಂಕ: 22–08–2019 ರಂದು 3.30 ಗಂಟೆಯ ನಂತರ. |
| 4. | ಮರು ಟೆಂಡರ್ ದಿನಾಂಕ (ಮರು ಟೆಂಡರಿಗೆ ಸಂಬಂಧಿಸಿದಂತೆ ಟೆಂಡರ ಫಾರಂಗಳನ್ನು ಅದೇ ದಿವಸ ಅಪರಾಹ್ನ 1.30 ಗಂಟೆಯ ವರೆಗೆ ವಿತರಿಸಲಾಗುವುದು ಹಾಗೂ ಅದೇ ದಿನ 5.00 ಗಂಟೆ ಒಳಗಾಗಿ ಟೆಂಡರ್ ಫಾರಂಗಳನ್ನು ಬಾಕ್ಸ್‌ನಲ್ಲಿ ಹಾಕಬೇಕಾಗುತ್ತದೆ) | ದಿನಾಂಕ: 22–08–2019 ರಂದು ಟೆಂಡರ್ ನಡೆಯದಿದ್ದಲ್ಲಿ ದಿನಾಂಕ: 24–08–2019 ರಂದು ಸಂಜೆ 5.00 ಗಂಟೆವರೆಗೆ ವಿಸ್ತರಿಸಿ ಅಂತಿಮ ಟೆಂಡರ್ ಪ್ರಕ್ರಿಯೆ ನಡೆಸಲಾಗುವುದು. |

ಟೆಂಡರ್‌ಗಳನ್ನು ಮೇಲೆ ನಮೂದಿಸಿದ ದಿನಾಂಕ ಹಾಗೂ ಸಮಯದ ಒಳಗಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ವಿಭಾಗ, ಕೆ.ಇ.ಬಿ. ರಸ್ತೆ, ಬೀದರ–585401 ರವರ ಕಾರ್ಯಾಲಯದಲ್ಲಿ ಸೀಲು ಮಾಡಿದ ಲಕೋಟೆಯ ಮೇಲೆ ಕಾಮಗಾರಿ ಹೆಸರು ನಮೂದಿಸಿ, ಈ ಕಾರ್ಯಾಲಯದಲ್ಲಿ ಇಟ್ಟಿರುವ ಟೆಂಡರ್ ಬಾಕ್ಸನಲ್ಲಿ ಹಾಕುವುದು.

## ಅಲ್ಪಾವಧಿ ಟೆಂಡರ್ ಹಾಕುವ ಕಾಮಗಾರಿಗಳ ವಿವರ.

| ಕ್ರ. ಸಂ | ವಲಯ | ಅರಣ್ಯ ಪ್ರದೇಶದ ಹೆಸರು | ವಿಸ್ತೀರ್ಣ (ಹೆಕ್ಟರ್ / ಕಿ.ಮೀ) | ಕೆಲಸದ ವಿವರ | ಕೆಲಸದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇಎಂಡಿ (ರೂ.ಗಳಲ್ಲಿ) | ಲೆಕ್ಕ ಶೀರ್ಷಿಕೆ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಹು.ಬಾದ | ಹುಮನಾಬಾದ ದಿಂದ ಹುಡಗಿ ರಸ್ತೆ ಬದಿ. NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 2 | ಹು.ಬಾದ | ಹುಡಗಿ ದಿಂದ ಚಿಟಗುಪ್ಪ ಕ್ರಾಸ್ ರಸ್ತೆ ಬದಿ.NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 3 | ಹು.ಬಾದ | ಚಿಟಗುಪ್ಪ ಕ್ರಾಸ್ ದಿಂದ ವಡ್ಡನಕೆರಾ ಕ್ರಾಸ್ ರಸ್ತೆ ಬದಿ.NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 4 | ಹು.ಬಾದ | ವಡ್ಡನಕೆರಾ ಕ್ರಾಸ್ ದಿಂದ ತಾಳಮಡಗಿ ರಸ್ತೆ | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |

| | | | | | | | |
|---|---|---|---|---|---|---|---|
| | | ಬದಿ. NH-65 | | | | | |
| 5 | ಬ.ಕಲ್ಯಾಣ | ಆರ್.ಟಿ.ಓ.ಚೆಕ್ ಪೋಸ್ಟ ದಿಂದ ರಾಜೇಶ್ವರ್ ರಸ್ತೆಬದಿ. NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 6 | ಬ.ಕಲ್ಯಾಣ | ರಾಜೇಶ್ವರ್ ದಿಂದ ತಡೋಳಾ ರಸ್ತೆಬದಿ. NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 7 | ಬ.ಕಲ್ಯಾಣ | ತಡೋಳಾ ದಿಂದ ಕೌಡಿಯಾಳ ರಸ್ತೆಬದಿ. NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 8 | ಬ.ಕಲ್ಯಾಣ | ಕೌಡಿಯಾಳ ದಿಂದ ಸಸ್ತಾಪೂರ ಬಂಗ್ಲಾ ರಸ್ತೆಬದಿ. NH-65 | 2.50 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |
| 9 | ಬ.ಕಲ್ಯಾಣ | ಸಸ್ತಾಪೂರ ಬಂಗ್ಲಾ ದಿಂದ ಅತ್ತಲಾಪೂರ ಕ್ರಾಸ್ ರಸ್ತೆಬದಿ. NH-65 | 2.00 ಕಿಮಿ | ಎಎನ್‌ಆರ್ ಮಾದರಿ–14(ಎ)ರ ರಸ್ತೆ ಬದಿ ಮಾನಸೂನ್ ನೆಡುತೋಪು ರಚನೆ ಕಾಮಗಾರಿ ನಿರ್ವಹಿಸುವುದು. (ಘಟಕ ದರದನ್ವಯ ಒಟ್ಟು ವಿಸ್ತೀರ್ಣಕ್ಕೆ )<br>**Maintenance of 14x20 size PBs 330 per ha** | 492400.00 | 12325.00 | AOA |

ಹೆಚ್ಚಿನ ವಿವರಗಳಿಗಾಗಿ ಈ ಕಾರ್ಯಾಲಯದಲ್ಲಿ ಕೆಲಸದ ದಿನ ಮತ್ತು ವೇಳೆಯಲ್ಲಿ ಸಂಪರ್ಕಿಸುವುದು ಮತ್ತು ಸದರಿ ಟೆಂಡರ್‌ನಲ್ಲಿ ತಿದ್ದುಪಡಿ ಮಾಡುವ ಸಂಪೂರ್ಣ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ. ಇ.ಎಂ.ಡಿ. ಮೊತ್ತವನ್ನು ರಾಷ್ಟ್ರೀಕೃತ ಬ್ಯಾಂಕ್/ಆರ್.ಬಿ.ಐ. ಮಾನ್ಯತೆ ಪಡೆದ ಬ್ಯಾಂಕಿನಿಂದ **"Deputy Conservator of Forests, Territorial Forest Division, Bidar" Payable at Bidar** ರವರ ಹೆಸರಿನಲ್ಲಿ ನೀಡುವುದು.

ಷರತ್ತುಗಳು:–

1. ಬೀದರ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ 2019–20ನೇ ಸಾಲಿಗೆ ಹೆಸರು ನೋಂದಾಯಿಸಿದ ಅರಣ್ಯ ಗುತ್ತಿಗೆದಾರರು ಮಾತ್ರ ಟೆಂಡರ್ ಸಲ್ಲಿಸಲು ಅರ್ಹರಿರುತ್ತಾರೆ. ಆದಾಯ ತೆರಿಗೆ ಪಾವತಿಸಿದ ದಾಖಲೆಯನ್ನು ಅವಶ್ಯವಾಗಿ ಟೆಂಡರ್ ಫಾರಂ ಜೊತೆ ಲಗತ್ತಿಸತಕ್ಕದ್ದು. ಲಗತ್ತಿಸದಿದ್ದಲ್ಲಿ ಟೆಂಡರ್ ರದ್ದುಗೊಳಿಸಲಾಗುವುದು.
2. ಈ ಕಾರ್ಯಾಲಯದಿಂದ ನೀಡಲಾದ ಟೆಂಡರ್ ಫಾರಂಗಳ ಹೊರತುಪಡಿಸಿ ಬೇರೆ ಯಾವುದೇ ಟೆಂಡರ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.
3. ಪ್ರತಿಯೊಂದು ಪ್ಯಾಕೇಜ/ಯೋಜನೆಯಡಿಯ ಕೆಲಸಗಳಿಗೆ ಪ್ರತ್ಯೇಕವಾಗಿ ಇ.ಎಂ.ಡಿ. ಮೊತ್ತದ ಡಿ.ಡಿ.ಯನ್ನು ಲಗತ್ತಿಸತಕ್ಕದ್ದು. ಒಂದು ವೇಳೆ ಟೆಂಡರದಾರರು ಒಂದಕ್ಕಿಂತ ಹೆಚ್ಚು ಕೆಲಸಕ್ಕೆ ಇ.ಎಂ.ಡಿ. ಮೊತ್ತದ ಒಂದೇ ಡಿ.ಡಿ.ಯನ್ನು ಸಲ್ಲಿಸಿದಲ್ಲಿ ಅವರ ಟೆಂಡರ ಭಾಗ: ಸ್ವೀಕೃತವಾದಲ್ಲಿ ಕೆಲಸ ಪೂರ್ಣಗೊಳ್ಳುವವರಿಗೆ ಪೂರ್ಣ ಮೊತ್ತದ ಡಿ.ಡಿ.ಯನ್ನು ಹಿಂದಿರುಗಿಸಲಾಗುವುದಿಲ್ಲ.
4. ಟೆಂಡರ್ ಸ್ವೀಕೃತವಾದ ನಂತರ ಅಥವಾ ಪೂರ್ವದಲ್ಲಿ ಯಾವುದೆ ಕಾರಣದಿಂದ ಇಲಾಖೆಯಿಂದ ಪೂರ್ಣ/ಭಾಗಶ: ಕಾಮಗಾರಿ ರದ್ದಾದಲ್ಲಿ ಇ.ಎಂ.ಡಿ. ಮೊತ್ತದ ಡಿ.ಡಿ.ಯನ್ನು ಮಾತ್ರ ವಾಪಾಸ ನೀಡಲಾಗುವುದು. ಅದಕ್ಕೆ ಯಾವುದೆ ಲಾಭಾಂಶವನ್ನು ನೀಡಲಾಗುವುದಿಲ್ಲ.
5. ಟೆಂಡರ್ ಕೆಲಸಗಳನ್ನು ವಲಯ ಅರಣ್ಯಾಧಿಕಾರಿಗಳ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ತಾಂತ್ರಿಕ ಸಲಹೆ ಹಾಗೂ ನೀಡುವ ಮಾರ್ಗದರ್ಶನದ ಅನುಸಾರ ಮಾಡತಕ್ಕದ್ದು.
6. ಮುಂಗಡ ಕಾಮಗಾರಿ ಕೆಲಸಗಳು ಋತುಮಾನಕ್ಕೆ ತಕ್ಕಂತೆ ಸಮಯೋಜಿತವಾಗಿ ಮಾಡತಕ್ಕದ್ದು.
7. ಟೆಂಡರ ಕಾಮಗಾರಿಗಳಲ್ಲಿ ಕೆಲವು ಋತುಮಾನ ಆಧಾರಿತವಾಗಿದ್ದು, ಈಗಾಗಲೇ ಇಲಾಖಾವತಿಯಿಂದ ನಿರ್ವಹಿಸಿದ ಕಾಮಗಾರಿಗಳ ಹಣವನ್ನು ಕಡಿತಗೊಳಿಸಿ, ಉಳಿದ ಕಾಮಗಾರಿಯ ಹಣ ಪಾವತಿಸಲಾಗುವುದು.
8. ಬೀದರ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೋಂದಾಯಿತ ಗುತ್ತಿಗೆದಾರರು ಮಾತ್ರ ಟೆಂಡರ್ ಸಲ್ಲಿಸಲು ಅರ್ಹರಿರುತ್ತಾರೆ.
9. ಟೆಂಡರ್ ಫಾರಂನ ಬೆಲೆ ರೂ. 200.00 ಮತ್ತು ತೆರಿಗೆಗಳು ಪ್ರತ್ಯೇಕ ನಿಯಮದಂತೆ.
10. ಕಾರ್ಯಾದೇಶ ತಲುಪಿದ ಒಂದು ತಿಂಗಳ ಅವಧಿಯಲ್ಲಿ ಕೆಲಸ ಪೂರ್ತಿಗೊಳಿಸುವುದು.
11. ಟೆಂಡರ್‌ದಾರರು ಪ್ರತ್ಯೇಕ ಯೋಜನೆ ಕೆಲಸಗಳಿಗೆ ದರ ನೀಡುವುದು ಅಥವಾ ಆತನು ನಿಗದಿತ ವೇಳೆಯಲ್ಲಿ ಕಾಮಗಾರಿಗಳನ್ನು ಪೂರ್ತಿಗೊಳಿಸಲು ತನ್ನ ಸಾಮರ್ಥ್ಯದ ಮೇರೆಗೆ ಅನುಗುಣವಾಗಿ ವಲಯದ ಕಾಮಗಾರಿಗಳಿಗೆ ದರ ನೀಡುವುದು.
12. ಇ.ಎಂ.ಡಿ. ಹಣವನ್ನು ರಾಷ್ಟ್ರೀಕೃತ ಅಥವಾ ಆರ್.ಬಿ.ಐ. ಅನುಮೋದಿತ ಬ್ಯಾಂಕ್‌ಗಳಿಂದ ಡಿ.ಡಿ. ಮುಖಾಂತರ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ ವಿಭಾಗ, ಬೀದರ ರವರ ಹೆಸರಿಗೆ ತೆಗೆದು ಒಪ್ಪಿಸಬೇಕು.
13. ಯಾವುದೇ ಕಾರಣಗಳನ್ನು ನೀಡದೇ ಯಾವುದೇ ಹಂತದಲ್ಲಿ ಟೆಂಡರ್ ಪ್ರಕ್ರಿಯೆ ರದ್ದು ಗೊಳಿಸಲಾಗುವುದು. ಅದಕ್ಕೂ ಯಾವುದೇ ಕಾರಣಗಳನ್ನು ನೀಡಲಾಗುವುದಿಲ್ಲ.

14. ಯಾವುದೇ ಕಾರಣಕ್ಕೂ ಅಂತಿಮವಾಗಿ ದಿ: 17-08-2019 ರಂದು ಟೆಂಡರ್ ಯಶಸ್ವಿ/ನಡೆಯದಿದ್ದಲ್ಲಿ ಮುಂದಿನ, ಅಂತಿಮ ತೀರ್ಮಾನ ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರು ಹೊಂದಿರುವರು ಹಾಗೂ ಹೆಚ್ಚಿನ ಕೆಲಸಗಳು ಇನ್ನು ಮಾಡಬೇಕಾದರೆ ಈಗ ಮಾಡಿದ ಟೆಂಡರನಲ್ಲಿ ಆಗಿರುವ ಟೆಂಡರ ದರದಲ್ಲಿ ಕೆಲಸ ಮಾಡಬೇಕಾಗುತ್ತದೆ.
15. ಗುತ್ತಿಗೆದಾರರು ರಿಪ್ಪಿಂಗ್, ಪಿಟಿಂಗ್, ಸಿಪಿಟಿ ಹಾಗೂ ಎಸ್‌ಎಂಸಿ ಕೆಲಸಗಳನ್ನು ನಿರ್ವಹಿಸಲು ಸ್ವಂತವಾಗಿ ಜೆಸಿಪಿ/ಹಿಟಾಚಿ /ಡೋಜರ್ ವಾಹನಗಳನ್ನು ಹೊಂದಿರಬೇಕು.
16. ಗುತ್ತಿಗೆದಾರರು ಅರಣ್ಯ ಇಲಾಖೆ ಕೆಲಸಗಳನ್ನು ಕನಿಷ್ಠ ಮೂರು ವರ್ಷಗಳು ನಿರ್ವಹಿಸಿರುವ ಅನುಭವ ಹೊಂದಿರಬೇಕು.
17. ಒಂದು ಸ್ಥಳದಲ್ಲಿ ಬೇಕಾಗಿರುವ ಎಲ್ಲಾ ಕೆಲಸಗಳನ್ನು (ರಿಪ್ಪಿಂಗ್/ಪಿಟಿಂಗ್) ಸಿಪಿಟಿ/ಎಸ್‌ಎಂಸಿ ಗಳನ್ನು ಟೆಂಡರುದಾರರು ತಮ್ಮ ದರಗಳನ್ನು ಕೋರುವುದು ಆಕ್ಷೇಪಣೆಯವಾಗಿರುತ್ತದೆ.
18. ಡೋಜರ್/ರಿಪ್ಪರಗಳಿಗೆ ಕೆಲಸದ ಸ್ಥಳದಿಂದ ಸ್ಥಳಕ್ಕೆ ಇಂಧನ/ದುರಸ್ತಿ/ಸಾಗಾಣಿಕೆ ವೆಚ್ಚವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು.
19. ಟೆಂಡರ್‌ನಲ್ಲಿ ಅರ್ಹರಾದ ಯಶಸ್ವಿ ಗುತ್ತಿಗೆದಾರರು ಕಾಮಗಾರಿ ಬಗ್ಗೆ 7 ದಿವಸಗಳಲ್ಲಿ ರೂ. 100=00 ಬಾಂಡ ಪತ್ರದಲ್ಲಿ ಈ ಕೆಳ ಸಹಿದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
20. ನಿಗದಿಪಡಿಸಿದ ಸಮಯದಲ್ಲಿ ಸೂಚಿಸಿದ ಅರಣ್ಯ ಪ್ರದೇಶದಲ್ಲಿ ಕಾಮಗಾರಿಗಳನ್ನು ಪೂರ್ಣವಾಗಿ ಹಾಗೂ ಗುಣಮಟ್ಟದ ಕೆಲಸಗಳನ್ನು ನಿರ್ವಹಿಸತಕ್ಕದ್ದು.
21. ನಿರ್ವಹಿಸಿದ ಕೆಲಸಗಳನ್ನು ಸಂಬಂಧಪಟ್ಟ ವಲಯ ಅರಣ್ಯ ಅಧಿಕಾರಿಗಳಿಂದ/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಚೆಕ್‌ಮೆಜರಮೆಂಟ್ ಆದ ಮೇಲೆಯೇ ಪಾವತಿಗಾಗಿ ಬಿಲ್ಲನ್ನು ಸಲ್ಲಿಸತಕ್ಕದ್ದು. ಸರ್ಕಾರದ ಸೂಚನೆ ಅನುಸಾರ ಬಿಲ್‌ನಲ್ಲಿ **CGST/SGST/IT** ತೆರಿಗೆಗಳನ್ನು ಕಡಿತಗೊಳಿಸಲಾಗುವುದು.
22. ಸದರಿ ಕೆಲಸಗಳಿಗೆ ಯಾವುದೇ ಮುಂಗಡ ಹಣ ನೀಡುವುದಿಲ್ಲ.
23. ಪ್ರತಿಯೊಂದು ಕೆಲಸಕ್ಕೆ ಇಎಂಡಿ ಹಣವನ್ನು ಠೇವಣಿಯಾಗಿ ಇಡತಕ್ಕದ್ದು.
24. ಯಾವುದೇ ಕಾರಣಕ್ಕೂ ಕಾಮಗಾರಿಗಳನ್ನು ಅರ್ಧ ಕೈಬಿಟ್ಟು ಹೋದಲ್ಲಿ ಅಂಥವರ ಇಎಂಡಿ ಹಣವನ್ನು ಯಾವುದೇ ಸೂಚನೆ ಇಲ್ಲದೇ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಂತಹವರನ್ನು ಕಪ್ಪು ಪಟ್ಟಿಯಲ್ಲಿ ಸೇರಿಸಲಾಗುವುದು.
25. ತಾಂತ್ರಿಕ/ಆಡಳಿತದ ಯಾವುದೇ ನಿರ್ಧಾರವು ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ತಿರ್ಮಾನ/ಆದೇಶ ಅಂತಿಮವಾಗಿರುತ್ತದೆ.
26. ಕೆಲಸಗಳನ್ನು ಸಂಬಂಧಪಟ್ಟ ವಲಯ ಅರಣ್ಯ ಅಧಿಕಾರಿಯವರು ಕ್ಷೇತ್ರ ಟಿಪ್ಪಣಿ ಪುಸ್ತಕದಲ್ಲಿ ನಿಮ್ಮ ಸಮಕ್ಷಮ ಅಳತೆ ಮತ್ತು ಪ್ರಮಾಣಗಳನ್ನು ದಾಖಲಿಸಿದಾಗ ಗುತ್ತಿಗೆದಾರರು ಸಹಿ ಮಾಡುವುದು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೀದರ ಉಪ ವಿಭಾಗ ಇವರ ಪರಿಶೀಲನೆ ಹಾಗೂ ಅಳತೆ ಮಾಪನ ಅನುಸರಿಸಿ ಬಿಲ್ಲನ್ನು ಪಾವತಿ ಮಾಡಲಾಗುವುದು.
27. ಯಾವುದೇ ತಕರಾರಿನ ಬಗ್ಗೆ ಬೀದರ ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು. ಅವರ ಆದೇಶವು ಅಧೀನಾಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಪಾಲನಾರ್ಹವಾದುದು.
28. ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಆದೇಶದ ಬಗ್ಗೆ ತೃಪ್ತಿಯಿಲ್ಲವಾದರೆ ಕಲಬುರಗಿ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಲ್ಲಿ ಮೇಲ್ಮನವಿ ಸಲ್ಲಿಸಬಹುದು ಹಾಗೂ ಅವರು ಕೊಡುವ ತೀರ್ಪು ಅಂತಿಮವಾದುದು.
29. ಕಾಮಗಾರಿ ಪ್ರಮಾಣ ಮತ್ತು ಸ್ಥಳಗಳು ತಾತ್ಕಾಲಿಕವಾಗಿದ್ದು, ಅವುಗಳ ಪ್ರಮಾಣ & ಸ್ಥಳ ಬದಲಾವಣೆಗಳಾಗುವ ಸಂಭವವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಕಾಮಗಾರಿಯನ್ನು ತೋರಿಸಿದ ಪ್ರಮಾಣ & ಸ್ಥಳಗಳನ್ವಯ ಅದನ್ನು ಗುತ್ತಿಗೆದಾರರು ಒಪ್ಪಿಕೊಂಡು ಸದರಿ ಸೂಚಿಸಿದ ಸ್ಥಳದಲ್ಲಿ ಕಾಮಗಾರಿಯನ್ನು ಮಾಡಬೇಕು.
30. ಕರ್ನಾಟಕ ಅರಣ್ಯ ಕಾಯ್ದೆ ಕರ್ನಾಟಕ ಅರಣ್ಯ ಸಂಹಿತೆ, ಕರ್ನಾಟಕ ಅರಣ್ಯ ಮ್ಯಾನ್ಯುಯಲ್ ಹಾಗೂ ಸರ್ಕಾರಿ ಅಧಿಸೂಚನೆ, ಆದೇಶಗಳು ಮತ್ತು ಕಾಲಕಾಲಕ್ಕೆ ಇಲಾಖೆಯಿಂದ ನೀಡಿದ ಸುತ್ತೋಲೆ ಹಾಗೂ ನಿರ್ದೇಶನಗಳ ಪ್ರಕಾರ ಅರಣ್ಯ ಗುತ್ತಿಗೆದಾರರು ಕಾಮಗಾರಿಗಳನ್ನು ನಿರ್ವಹಿಸುವುದು.
31. ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಈ ಮುಂಚೆ ಯಾವುದೇ ಇಲಾಖೆಯಲ್ಲಿ ಕಪ್ಪು ಪಟ್ಟಿಯ ಹೆಸರಿನಲ್ಲಿ ಸೇರ್ಪಡೆಯಾಗಿರಬಾರದು.
32. ಮುಳ್ಳುತಂತಿ ಮತ್ತು ಪಾಲಿಥೀನ್ ಚೀಲಗಳ ಖರೀದಿಯನ್ನು ಹೊರತುಪಡಿಸಿ ಉಳಿದ ಕಾಮಗಾರಿಗಳನ್ನು ನಿರ್ವಹಿಸುವುದು ಹಾಗೂ ಅದಕ್ಕೆ ಸಂಭಂಧಿಸಿದ ಮೊತ್ತವನ್ನು ಇಲಾಖೆಯಿಂದ ಪಾವತಿಸಲಾಗುವುದು.
33. ಮೇಲಿನ ಷರತ್ತುಗಳಲ್ಲದೇ ಹೆಚ್ಚುವರಿ ಅಗತ್ಯವೆನಿಸಿದ ಷರತ್ತುಗಳನ್ನು ಟೆಂಡರ್ ಸಮಯದಲ್ಲಿ ಲಿಖಿತ ಮೂಲಕ ತಿಳಿಸಲಾಗುವುದು.
34. ಇದು ಸಂಕ್ಷಿಪ್ತ ಟೆಂಡರ್ ಆಗಿದ್ದು, ಹೆಚ್ಚಿನ ಮಾಹಿತಿಯನ್ನು ಕಛೇರಿಯ ಕೆಲಸದ ಸಮಯದಲ್ಲಿ ಪಡೆಯಬಹುದು.
35. ಸದರಿ ಕಾಮಗಾರಿಗಳನ್ನು ಯಶಸ್ವಿ ಗುತ್ತಿಗೆದಾರರು ನಿರ್ವಹಿಸುವಾಗ ಯಾವುದೇ ಆಸ್ತಿ, ಪ್ರಾಣ ಹಾನಿ, ಬಾಲ ಕಾರ್ಮಿಕರನ್ನು ನೇಮಿಸುವುದು ಮತ್ತು ಕಾನೂನು ಬಾಹಿರವಾಗಿ ನಡೆದ ಘಟನೆಗಳಿಗೆ ಇಲಾಖೆಯು ಜವಾಬ್ದಾರರಾಗುವುದಿಲ್ಲ. ಇದಕ್ಕೆ ಗುತ್ತಿಗೆದಾರರೆ ಸಂಪೂರ್ಣ ಜವಾಬ್ದಾರರು. ಸದರಿ ಕಾಮಗಾರಿಗಳು ಅರಣ್ಯ ಪ್ರದೇಶದಲ್ಲಿ ನಡೆಯುವುದರಿಂದ, ನಿಮ್ಮಿಂದ ಅಥವಾ ನಿಮ್ಮಿಂದ ನಿಯೋಜಿಸಿದ ವ್ಯಕ್ತಿಗಳಿಂದ ಅರಣ್ಯ ಅಪರಾಧವಾದಲ್ಲಿ ಕಾನೂನು ರೀತಿಯ ಕ್ರಮ ತೆಗೆದುಕೊಳ್ಳಲಾಗುವುದು.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಪ್ರಾದೇಶಿಕ ವಿಭಾಗ, ಬೀದರ.

ಪ್ರತಿಯನ್ನು :-

1. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಕಲಬುರಗಿ ವೃತ್ತ, ಕಲಬುರಗಿ ರವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
2. ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ/ಸಾಮಾಜಿಕ ಅರಣ್ಯ ವಿಭಾಗ, ಕಲಬುರಗಿ, ಯಾದಗಿರಿ, ರಾಯಚೂರು, ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಟೆಂಡರ್ ಕುರಿತು ವ್ಯಾಪಕ ಪ್ರಚಾರಕ್ಕಾಗಿ ಕ್ರಮಕೈಗೊಳ್ಳಲು ಕೋರಲಾಗಿದೆ.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಉಪ ವಿಭಾಗ, ಬೀದರ/ಬಸವಕಲ್ಯಾಣ ಇವರಿಗೆ ಮಾಹಿತಿಗಾಗಿ ಮತ್ತು ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಲಾಗಿದೆ.
4. ಈ ವಿಭಾಗದ ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಲಾಗಿದೆ.
5. ಈ ವಿಭಾಗದ ಎ6 ಶಾಖೆಗೆ ನೀಡುತ್ತಾ ಅಧಿಸೂಚನೆ ದಿನಾಂಕದಿಂದ ನಿಗಧಿತ ದಿನಾಂಕದವರೆಗೆ ಟೆಂಡರ್ ಫಾರಂಗಳನ್ನು ನಿಯಮದನ್ವಯ ನೀಡಲು ಸೂಚಿಸಲಾಗಿದೆ.
6. ಈ ವಿಭಾಗದಲ್ಲಿ ಪ್ರಸ್ತುತ ಸಾಲಿಗೆ ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿದವರಿಗೆ.
7. ಈ ಕಛೇರಿಯ ಸೂಚನಾ ಫಲಕಕ್ಕೆ.

# *ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಾರ್ಯಾಲಯ,*
# *ಪ್ರಾದೇಶಿಕ ಅರಣ್ಯ ವಿಭಾಗ, ಬೀದರ.*

ಸಂ:ಎ1:ಬಿಜಿಟಿ:ಅಕಾ:ಟೆಂಡರ್:ಸಿಆರ್–46/2019–20 ದಿನಾಂಕ: 06–08–2017.

ಇವರಿಗೆ,

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ಟೆಂಡರ್ ಬುಲೇಟಿನ್ ಅಧಿಕಾರಿಗಳು,
ಬೀದರ.

ಮಾನ್ಯರೆ,

*ವಿಷಯ:* 2019–20ನೇ ಸಾಲಿನಲ್ಲಿ ಅರಣೀಕರಣ ಕಾಮಗಾರಿ ನಿರ್ವಹಿಸಲು ಟೆಂಡರ್ ಪ್ರಕಟಣೆ ಕುರಿತು.

0=0=0

2019–20ನೇ ಸಾಲಿನಲ್ಲಿ ಮಾನಸೂನ ಕಾಮಗಾರಿಗಳನ್ನು ಮಾಡಲು/ ನಿರ್ವಹಿಸಲು ಮತ್ತು ಸಸ್ಯಕ್ಷೇತ್ರ ನಿರ್ಮಾಣ ಮಾಡಲು ಅರಣ್ಯ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಈ ಸಂಬಂಧ ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆಯ ಹತ್ತು ಪ್ರತಿಗಳು ಹಾಗೂ ಬೀದರ ಜಿಲ್ಲಾ ಟೆಂಡರ್ ಬುಲೇಟಿನ್ **(Bidar Dist. NIC)** ನಲ್ಲಿ ಅಳವಡಿಸಿದ ಮಾಹಿತಿಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿದೆ. ದಯಮಾಡಿ ಟೆಂಡರ್ ಪ್ರಕಟಣೆಯನ್ನು ಜಿಲ್ಲಾ ಬುಲೇಟಿನ್‌ನಲ್ಲಿ ಪ್ರಕಟಿಸಲು ಅಂಗೀಕರಿಸಿ, ಅದರ ಪ್ರತಿಯನ್ನು ಈ ಕಛೇರಿಯ ಮಾಹಿತಿಗಾಗಿ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಪ್ರಾದೇಶಿಕ ವಿಭಾಗ, ಬೀದರ.

1. ಪ್ರತಿಯನ್ನು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಕಲಬುರಗಿ ವೃತ್ತ, ಕಲಬುರಗಿ ರವರ ಅವಗಾಹನೆಗಾಗಿ ಗೌರವಗಳೊಂದಿಗೆ ಸಲ್ಲಿಸಲಾಗಿದೆ.
2. ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಪ್ರಾದೇಶಿಕ / ಸಾಮಾಜಿಕ ಅರಣ್ಯ ವಿಭಾಗ, ಯಾದಗಿರಿ/ರಾಯಚೂರು, ಗುಲಬರ್ಗಾ, ಬೀದರ ರವರಿಗೆ ಮಾಹಿತಿಗಾಗಿ ಕಳುಹಿಸುತ್ತಾ ಟೆಂಡರ ಕುರಿತು ವ್ಯಾಪಕ ಪ್ರಚಾರಕ್ಕಾಗಿ ಕ್ರಮಕೈಗೊಳ್ಳಲು ಕೋರಲಾಗಿದೆ.
3. ಪ್ರತಿಯನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಉಪ–ವಿಭಾಗ, ಬೀದರ / ಬಸವಕಲ್ಯಾಣ ಇವರಿಗೆ ಮಾಹಿತಿಗಾಗಿ ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಲಾಗಿದೆ.
4. ಪ್ರತಿಯನ್ನು ಟೆಂಡರ ಪ್ರಕಟಣೆಯೊಂದಿಗೆ ವಿಭಾಗದ ಎಲ್ಲಾ ವಲಯ ಅರಣ್ಯ ಅಧಿಕಾರಿಗಳಿಗೆ ಮಾಹಿತಿಗಾಗಿ ವ್ಯಾಪಕ ಪ್ರಚಾರಕ್ಕಾಗಿ ಕಳುಹಿಸಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಪ್ರಾದೇಶಿಕ ವಿಭಾಗ, ಬೀದರ.

# ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಾರ್ಯಾಲಯ,
# ಪ್ರಾದೇಶಿಕ ಅರಣ್ಯ ವಿಭಾಗ, ಬೀದರ.

**ಸಂಖ್ಯೆ:ಎ1:ಬಿಜಿಟಿ:ಅಕಾ:ಟೆಂಡರ್/ಸಿಆರ್–46/2019–20** **ದಿನಾಂಕ: 07.08.2019.**

ಇವರಿಗೆ,

ಜಾಹಿರಾತು ವ್ಯವಸ್ಥಾಪಕರು,
ವಿಜಯ ಕರ್ನಾಟ & ಪ್ರಜಾವಾಣಿ,
ಕನ್ನಡ ದಿನಪತ್ರಿಕೆ,
ಕಲಬುರಗಿ.

ಮಾನ್ಯರೆ,

ವಿಷಯ: 2019–20ನೇ ಸಾಲಿನ ಮಾನ್ಸೂನ್ ಕಾಮಗಾರಿ ನಿರ್ವಹಿಸಲು ಅಲ್ಪಾವಧಿ ಟೆಂಡರ್ ಪ್ರಕಟಣೆ ಹೋರಡಿಸಲಾಗಿದ್ದು ಸಾರ್ವಜನಿಕರಲ್ಲಿ ಪ್ರಕಟಣೆ ಮಾಡುವ ಕುರಿತು.

ಉಲ್ಲೇಖ: ಈ ಕಛೇರಿಯ ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 06.08.2019.

0=0=0

ಮೇಲ್ಕಂಡ ವಿಷಯ ಕುರಿತು ಉಲ್ಲೇಖಿತ ಅಲ್ಪಾವಧಿ ಟೆಂಡರ್ ಪ್ರಕಟಣೆಯಂತೆ 2019–20ನೇ ಸಾಲಿನಲ್ಲಿ ನಿರ್ವಹಿಸಬೇಕಾಗಿರುವ ರಸ್ತೆ ಬದಿ ಮಾನ್ಸೂನ್ ನೆಡುತೋಪು ನಿರ್ಮಾಣ ಕಾಮಗಾರಿ ಕೈಗೊಳ್ಳಲು ಟೆಂಡರ್ ಕರೆಯಲಾಗಿದೆ. ಅದನ್ನು ಸಾರ್ವಜನಿಕರ ತಿಳುವಳಿಕೆಗಾಗಿ ತಮ್ಮ ದಿನಪತ್ರಿಕೆಗಳಲ್ಲಿ ಒಂದು ದಿನಕ್ಕೆ ಮಾತ್ರ ಪ್ರಕಟಿಸಿ ಪ್ರಚಾರ ಮಾಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪ್ರಾದೇಶಿಕ ವಿಭಾಗ, ಬೀದರ.

ಕರ್ನಾಟಕ ಸರ್ಕಾರ
ಅರಣ್ಯ ಇಲಾಖೆ

ಸಂಖ್ಯೆ:ಎ1/ಬಿಜಿಟಿ/ಅಕಾ/ಟೆಂಡರ್/ಸಿಆರ್–46/2019–20, ದಿನಾಂಕ: 06.08.2019.

## ಅಲ್ಪಾವಧಿ ಟೆಂಡರ್ ಪ್ರಕಟಣೆ.

*****

ಬೀದರ ಪ್ರಾದೇಶಿಕ ವಿಭಾಗದಲ್ಲಿ 2019–20ನೇ ಸಾಲಿಗೆ ಅರಣ್ಯ ಗುತ್ತಿಗೆದಾರರೆಂದು ನೋದಾಯಿಸಿದವರಿಂದ ರಸ್ತೆ ಬದಿ ಮಾನ್ಸೂನ್ ನೆಡುತೋಪು ನಿರ್ಮಾಣ ಕಾಮಗಾರಿ ನಿರ್ವಹಿಸಲು ಅಲ್ಪಾವಧಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್ ಫಾರಂ ನಿಡುವ ಕಡೆ ದಿನಾಂಕ: 13–08–2019, ಅಪರಹ್ನ 01:30 ಗಂಟೆ ವರೆಗೆ ಹಾಗೂ ಭರ್ತಿ ಮಾಡಿದ ಫಾರಂ ಸ್ವೀಕರಿಸುವ ಕಡೆ ದಿನಾಂಕ: 14–08–2019 ರಂದು ಅಪರಹ್ನ 01:30 ಗಂಟೆಯ ವರೆಗೆ & ಟೆಂಡರ್ ತೆರೆಯುವ ದಿನಾಂಕ: 14–08–2019 ರಂದು ಅಪರಹ್ನ 03:30 ಗಂಟೆಯ ನಂತರ ನಿಗಧಿ ಪಡಿಸಲಾಗಿದೆ. ಆಸಕ್ತಿಹೊಂದಿರುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ 08482–226358ಗೆ (ರಜಾ ದಿನಗಳು ಹೊರತುಪಡಿಸಿ) ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಅಥವಾ ಖುದ್ದು ಹಾಜರಾಗಿ ಮಾಹಿತಿ ಪಡೆಯಬಹುದಾಗಿದೆ.

*ಸಹಿ/–*

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಪ್ರಾದೇಶಿಕ ವಿಭಾಗ, ಬೀದರ.